ನಿದ್ದೆಯಲ್ಲಿಯೂ ಅಪಾಯವನ್ನು ಮುಂದಾಲೋಚಿಸಿ ಎಚ್ಚರಿಕೆಯಿಂದಲೇ ಇರಬೇಕಾಗಿತ್ತು. ಆಂದರೆ ಬದುಕಿನ ಪ್ರತಿಕ್ಷಣವೂ ಅನಿಶ್ಚಿತತೆ,  ಆತಂಕ, ಒತ್ತಡಗಳು ಕಾಡುತ್ತಲೇ ಇರುತ್ತಿದ್ದವು. ಹಾಗಿದ್ದರೂ ಶಿಲಾಯುಗದ ಮಾನವ ಅಧಿಕ ರಕ್ತದೊತ್ತಡ, ಮಧುಮೇಹ, ಗ್ಯಾಸ್, ಮೈಗ್ರೇನ್, ಅಲ್ಸರ್ ಮುಂತಾದ ಕಾಯಿಲೆಗಳಿಗೆ ಮಾತ್ರೆಗಳನ್ನು ನುಂಗದೆ ಆರೋಗ್ಯಕರವಾಗಿ ಹೇಗೆ ಬದುಕುತ್ತಿದ್ದ?

ಬುದ್ಧಿವಂತರಾದ ನೀವು ತರ್ಕ ಮಾಡಿ ಉತ್ತರ ಹೇಳಬಹುದು– ಆಗಿನ ಗಾಳಿ, ನೀರು, Aಹಾರಗಳು ಶುದ್ಧವಾಗಿದ್ದವು.  ಇದನ್ನು ಒಪ್ಪಬಹುದಾದರೆ ಕೆಲವು ಕಾಯಿಲೆಗಳಿಗೆ ಕಾರಣ ಮಾನಸಿಕ ಒತ್ತಡ ಎನ್ನುವುದು ಹೇಗೆ ಸರಿ?

ಅಥವಾ ಆಗಿನ ಕಾಲದಲ್ಲಿ ಔಷಧಿಗಳು ರೋಗಪರೀಕ್ಷಾ ವಿಧಾನಗಳು ಇರಲೇ ಇಲ್ಲ ಎಂದು ಇನ್ನೂ ಕೆಲವರು ಹೇಳಬಹುದು. ಅಂದರೆ ಇವನ್ನೆಲ್ಲಾ ಕಂಡುಹಿಡಿಯುತ್ತಾ ಬಂದಂತೆ ಕಾಯಿಲೆಗಳೂ ಹೆಚ್ಚಾಯಿತೇ? ಅಥವಾ ಸಣ್ಣಪುಟ್ಟ ಅನಾರೋಗ್ಯದ ಲಕ್ಷಣಗಳಿಗೆ ದೊಡ್ಡದೊಡ್ಡ ಹೆಸರುಗಳ ಮೂಲಕ ನಮ್ಮ ಮನಸ್ಸಿನಲ್ಲಿ ಭಯವನ್ನು ಬೇರೂರಿಸಿ ಔಷಧಿ ಕಂಪೆನಿಗಳು ಹಣ ಮಾಡುತ್ತಿವೆಯೇ? ಆಧುನಿಕ ವೈದ್ಯಶಾಸ್ತ್ರ ರೋಗಿಗಳು ನರಳುತ್ತಾ ಹೆಚ್ಚು ಕಾಲ ಬಾಳುವುದಕ್ಕೆ ಮಾತ್ರ ಸಹಕಾರಿಯೇ?

★ ಶಿಲಾಯುಗದ ಮಾತು ಬಿಡಿ, ಇವತ್ತಿನ ಕಾಡುಪ್ರಾಣಿಗಳು ಹೇಗೆ ಬದುಕುತ್ತಿವೆ ನೋಡೋಣ. ಉದಾಹರಣೆಗೆ ಕಾಡಿನ ಸಾಧುಪ್ರಾಣಿಯಾದ ಜಿಂಕೆ ಎಂದುಕೊಳ್ಳಿ. ಇದು ಆಹಾರಕ್ಕಾಗಿ ಹುಡುಕಾಡುವಾಗ ಹುಲಿ ಚಿರತೆಗಳು ಬೇಟೆಗಾಗಿ ಹೊಂಚು ಹಾಕುತ್ತಲೇ ಇರುತ್ತವೆ. ರಾತ್ರಿಯ ನಿದ್ದೆಯಲ್ಲಿಯೂ ಕೂಡ ಸಣ್ಣ ಸದ್ದಿಗೆ ಅವು ಎಚ್ಚರಗೊಳ್ಳುತ್ತವೆ. ಇಂತಹ ವಾತಾವರಣದಲ್ಲಿಯೇ ಜಿಂಕೆಗಳು ಆಹಾರದ ಹುಡುಕಾಟ, ವಿಶ್ರಾಂತಿ, ಮೈಥುನ, ಸಂತಾನದ ಪೋಷಣೆ ಎಲ್ಲವನ್ನೂ ಮುಂದುವರೆಸುತ್ತಿಲ್ಲವೇ? ಒತ್ತಡ ಅಪಾಯಕಾರಿ ಎನ್ನುವುದು ನಿಜವಾಗಿದ್ದರೆ ಆಧುನಿಕ ಮಾನವನೊಬ್ಬ ಇಂತಹ ಸಂದರ್ಭದಲ್ಲಿ ಬದುಕಬೇಕಾಗಿದ್ದಾಗ ಅವನಿಗೆ ನಿಮಿರು ದೌರ್ಬಲ್ಯ, ಶೀಘ್ರ ಸ್ಖಲನದಂತಹ ಲೈಂಗಿಕ ತೊಂದರೆಗಳಿಂದಾಗಿ ವಂಶಾಭಿವೃದ್ಧಿ ನಿಂತೇ ಹೋಗುತ್ತಿತ್ತೇನೋ! ಅಳಿದುಳಿದ ಮಾನವ ಕುಲವೂ ಕಾಯಿಲೆಗಳಿಂದಾಗಿ ನಶಿಸಿಹೋಗುತ್ತಿತ್ತು ಎಂದೂ ಊಹೆ ಮಾಡಲು ಸಾಧ್ಯ. ಆದರೆ ಪ್ರಾಣಿಗಳಿಗೇಕೆ ಹಾಗಾಗುತ್ತಿಲ್ಲ?

## ನಂಬಿಕೆ ಮತ್ತು ಮನೋಭಾವ

ನೀವು ಏನನ್ನು ನಂಬಿಕೊಳ್ಳುತ್ತೀರೋ ಅದು ನಿಜವಾಗುತ್ತದೆ ಎಂದು ಸಾಮಾನ್ಯವಾಗಿ ಎಲ್ಲಾ ಧರ್ಮಗಳಲ್ಲೂ ಹೇಳುವ ಮಾತು. ಹಾಗಿದ್ದರೆ ಬೆಂಕಿಯನ್ನು ಮಂಜುಗಡ್ಡೆ ಎಂದು ನಂಬಿಕೊಂಡು ಮುಟ್ಟಿದರೆ ಕೈಸುಡುವುದಿಲ್ಲವೇ? ದಿನವಿಡೀ ಮಲಗಿಕೊಂಡು ಟೀವಿ ನೋಡುತ್ತಿದ್ದರೆ ತೂಕ ಕಡಿಮೆಯಾಗುತ್ತದೆ ಎಂದು ನಂಬಿಕೊಂಡರೆ ಅದು ನಿಜವಾಗಬಹುದೇ? ಸೂರ್ಯ ಪಶ್ಚಿಮದಲ್ಲಿ ಹುಟ್ಟುತ್ತಾನೆ ಎಂದು ನಂಬಿಕೊಂಡರೆ ಹಾಗಾಗಬಹುದೇ? ಇವೆಲ್ಲಾ ಸಾಧ್ಯವಿಲ್ಲ ಎಂದು ಮಗುವಿಗೂ ತಿಳಿಯುತ್ತದೆ. ಹಾಗಿದ್ದರೆ ನಂಬಿಕೆಗಳಿಗೆ ಏಕಿಷ್ಟು ಮಹತ್ವವನ್ನು ನೀಡಲಾಗಿದೆ?

ಇದನ್ನು ತಿಳಿಯಲು ನಂಬಿಕೆ ಮತ್ತು ಮನೋಭಾವಗಳ ನಡುವಿನ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಬೇಕು. ನಂಬಿಕೆ ಕೇವಲ ಒಂದು ವ್ಯಕ್ತಿ ಅಥವಾ ಘಟನೆಯ ಬಗೆಗೆ ಇರುತ್ತದೆ. ಆದರೆ ಮನೋಭಾವ ನಮ್ಮ ಇಡೀ ಜೀವನದ ಧೋರಣೆಯಾಗಿರುತ್ತದೆ. ಉದಾಹರಣೆಗೆ ಪಕ್ಕದ ಮನೆಯವನು ಸ್ವಾರ್ಥಿ ಎಂದು ನಾವು ನಂಬಿಕೊಂಡರೆ ಅದು ಆ ವ್ಯಕ್ತಿಗೆ ಮಾತ್ರ ಸಂಬಂಧಿಸಿದ್ದಾಗಿರುತ್ತದೆ. ಆದರೆ ಮನೆ ಮಾಲಿಕರೆಲ್ಲಾ ಸ್ವಾರ್ಥಿಗಳು ಅಥವಾ ಬಾಡಿಗೆದಾರರೆಲ್ಲಾ ಬೇಜವಾಬ್ದಾರಿಯವರು ಎಂದುಕೊಳ್ಳುವುದು ಮನೋಭಾವವಾಗುತ್ತದೆ. ಮನೋಭಾವಗಳು ನಂಬಿಕೆಯ ಮೇಲೇ ರೂಪಿತವಾಗುತ್ತವೆ. ಆದರೆ ನಂಬಿಕೆಗಿಂತ ಆಳವಾದ ಪ್ರಭಾವವನ್ನು ಬೀರುತ್ತವೆ. ನಮ್ಮ ಅನುಭವಗಳನ್ನೆಲ್ಲಾ ಮನೋಭಾವಗಳ ಮೂಲಕ ಸೋಸಿ ನಾವು ಮಿದುಳಿನಲ್ಲಿ ದಾಖಲಿಸಿಕೊಳ್ಳುತ್ತೇವೆ. ಹಾಗೆ ಗಟ್ಟಿಯಾಗಿ ಮನಸ್ಸಿನಾಳದಲ್ಲಿ ಕೂತಿರುವ ಮನೋಭಾಗಳ ಆಧಾರದ ಮೇಲೆ ನಮ್ಮ ಅಭಿಪ್ರಾಯ, ಆಯ್ಕೆ, ನಿರ್ಧಾರಗಳೆಲ್ಲಾ ರೂಪುಗೊಳ್ಳುತ್ತಾ ಹೋಗುತ್ತವೆ.

ಮನೋಭಾವಗಳು ನಮ್ಮ ಮಿದುಳಿನ ಹಲವಾರು ಕೇಂದ್ರಗಳನ್ನು ನಿರ್ದೇಶಿಸುತ್ತಾ ಹಾರ್ಮೋನ್‌ಗಳ ಸೃಜನೆಯ ದರದಲ್ಲಿ ವ್ಯತ್ಯಾಸವನ್ನುಂಟುಮಾಡಿ ನಮ್ಮ ದೇಹದ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದು ಸಾಕಷ್ಟು ಸಂಶೋಧನೆ ಸಮೀಕ್ಷೆಗಳಿಂದ ತಿಳಿದುಬಂದಿದೆ.



ವಶೀಕರಣ ಸ್ಪೆಷಲಿಸ್ಟ್

ಶ್ರೀಯುತ ಮಂಜುನಾಥ ಗುರೂಜಿಯವರಿಂದ
ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಶ್ರೀ ಮಂಜುನಾಥ ಗುರೂಜಿ"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ
ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ  ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.
ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.
ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.
ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.
ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ
ಶ್ರೀ ಮಂಜುನಾಥ ಗುರೂಜಿ
9886999747